ಮಂಗಳೂರು ಬಂದರಿನಲ್ಲಿ ಹೂಳನ್ನು ತೆಗೆಯುವುದು

69 (992) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಂದರಿನಲ್ಲಿ ಹೂಳು ತುಂಬಿರುವುದರಿಂದ ಹಡಗುಗಳ ಸಂಚಾರಕ್ಕೆ ಮತ್ತು ಮೀನುಗಾರರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೂಳನ್ನು ತೆಗೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ. ಇದಕ್ಕಾಗಿ ಈ ಸಾಲಿನಲ್ಲಿ ಹಣವನ್ನು ಮೀಸಲಿರಿಸ ಲಾಗಿದೆಯೇ?

ಶ್ರೀ ಜಿ. ಕೃಷ್ಣ ಪಾಲೇಮಾರ್ (ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು) :

ಅ) ಹೌದು.

ಆ) ಮಂಗಳೂರು ಬಂದರಿನ ನಾರ್ತ್ ವಾರ್ಫ್, ಸೆಂಟರ್ ವಾರ್ಫ್, ಸೌತ್ ವಾರ್ಫ್, ಫಿಶರೀಸ್ ವಾರ್ಫ್ ಮತ್ತು ಚಾನಲ್ ಹಾಗೂ ಹ್ಯೂಗೆ ಬಜಾರ್ ಕ್ರೀಕ್ ಪ್ರದೇಶದಲ್ಲಿ ಸುಮಾರು 5,61,832.00 ಘ.ಮೀ.ನಷ್ಟು ಹೂಳೆತ್ತುವ ಬಗ್ಗೆ ರೂ. 1098.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಆದರೆ ಅನುದಾನದ ಅಭಾವದಿಂದಾಗಿ ಅತ್ಯಗತ್ಯವಾಗಿ ಮೀನುಗಾರಿಕೆ ಜೆಟ್ಟಿ ಮುಂಭಾಗದ ಪ್ರದೇಶದಲ್ಲಿ ಮಾತ್ರ ಹೂಳೆತ್ತಲು ರೂ. 185.00 ಲಕ್ಷಗಳ ಅಂದಾಜುಪಟ್ಟಿಗೆ ದಿನಾಂಕ: 13.8.2007 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು. ಅದರಂತೆ ಸದರಿ ಕಾಮಗಾರಿಯನ್ನು ದಿನಾಂಕ: 15.5.2009 ರಂದು ಪೂರ್ಣಗೊಳಿಸಿದೆ.

ಈ ಸಾಲಿನಲ್ಲಿ ಹೂಳೆತ್ತುವ ಕಾಮಗಾರಿಗೆ ಹಣವನ್ನು ಮೀಸಲಿರಿಸಲಾಗಿಲ್ಲ.

ಶ್ರೀ ಯು.ಟಿ.ಖಾದರ್ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ನೋಡಿದ ತಕ್ಷಣ ದಕ್ಷಿಣ ಕನ್ನಡ ಜಿಲ್ಲೆಯವರು ಏತನೀರಾವರಿಯನ್ನು ಕೊಡಿ, ಬ್ಯಾರೇಜನ್ನು ಕೊಡಿ, ಇನ್ನಿತರ ಸಾವಿರಾರು ಕೋಟಿ ರೂಪಾಯಿಗಳ ಅನುದಾನವನ್ನು ಕೇಳುವುದಿಲ್ಲ. ಬಹುಶಃ ನಮ್ಮ ಜಿಲ್ಲೆಯವರು ಮೀನುಗಾರಿಕೆಯಿಂದ ಅಥವಾ ಬೀಡಿ ಕಟ್ಟುವಿಕೆಯಿಂದ

ಇನ್ನಿತರ ಶ್ರಮದ ಮೂಲಕ ಜಿಲ್ಲೆಯಲ್ಲಿ ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಸುವಂತಹ ಕೆಲಸಗಳು ಆಗಿದೆ. ಬಹುಶಃ ಮೀನುಗಾರಿಕೆ ಜನರಿಗೆ ಬಹಳಷ್ಟು ತೊಂದರೆ ಇದೆ ಎಂದು ಹೇಳುವುದಕ್ಕೆ ಇಚ್ಚಿಸುತ್ತೇನೆ. ಅಲ್ಲಿ ಹೂಳು ಎತ್ತುವ ಮೂಲಕ ಆ ಪ್ರದೇಶದಲ್ಲಿ ಮೀನುಗಾರಿಕೆ ತೊಂದರೆಯಾಗು ವಂತಹದ್ದನ್ನು ಮನಗಂಡು ಕಳೆದ ವರ್ಷವು ಕೂಡ ಆಗಿದೆ. ಅದಕ್ಕೆ ಅಂದಾಜನ್ನು ಬಹುಶಃ 1098 ಲಕ್ಷ ರೂಪಾಯಿಗಳೆಂದು ಅಂದಾಜು ಪಟ್ಟಿಯನ್ನು ಮಾಡಿದ್ದೇವೆ. ಇಲ್ಲಿ ಬೇಸರದ ಸಂಗತಿ ಎಂದರೆ, ಅಲ್ಲಿ ಅನುದಾನವನ್ನು ಇಟ್ಟಿದ್ದು 185 ಲಕ್ಷ ರೂಪಾಯಿಗಳು ಮಾತ್ರ. ಬಹುಶಃ 10% ಕೂಡ ಅಲ್ಲಿ ಯಾವುದೇ ಹಣವು ಮೀಸಲಾಗಿಲ್ಲವೆನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ಇವತ್ತು ಬಹುಶಃ ನಮ್ಮ ಸಚಿವರಿಗೆ ಪೂರಕವಾಗಿ ಸಹಾಯ ನೀಡುವಂತೆ ಈ ರಾಜ್ಯದ Finance ನ್ನು ಯಾರು ವಹಿಸಿ ಕೊಂಡಿದ್ದಾರೆ, ವಿಶೇಷವಾದ ಅನುದಾನವನ್ನು ಕೊಡುವಂತಹ ವ್ಯವಸ್ಥೆ ಇವತ್ತು ಮಾಡಬೇಕೆಂದು ನಾನು ಕೇಳುತ್ತೇನೆ. ಇದರ ಜೊತೆಯಲ್ಲಿ ಅಳಿವೆ ಬಾಗಿಲಿನಲ್ಲಿ ಅಲ್ಲಿ ಬೋಟ್ ಹೋಗದೆ ಅಲ್ಲಿ ಎರಡು-ಮೂರು ಜನರು ತೀರಿಹೋದ ಹಿಂದಿನ ಉದಾಹರಣೆಗಳು ಇವೆ. ಇದು ನಮ್ಮ ಬಂದರಿನ ಪ್ರದೇಶವಾದರೆ ಇನ್ನು ನೇತ್ರಾವತಿ ಮತ್ತು ಗುರುಪುರ ಆ ಒಂದು ನದಿಯಲ್ಲಿಯೂ ಕೂಡ ಮೀನುಗಾರಿಕೆಗೆ ಈ ಒಂದು ಸಮಸ್ಯೆಯಿಂದ ಆಗುತ್ತಿಲ್ಲ. ಆಕಾರಣ ದಕ್ಷಿಣಕ್ಕನಡ ಜಿಲ್ಲೆಯ ಆರ್ಥಿಕ ಸಂಪನ್ಮೂಲದ ಮೂಲಕಸುಬಾದ ಮೀನುಗಾರಿಕೆಗೆ ...ಏಕೆಂದರೆ, ಕೆಲವರು ಮೀನನ್ನು ಹಿಡಿಯುತ್ತಾರೆ, ಕೆಲವರು ಮಾರುತ್ತಾರೆ. ಇದು ಸೈಕಲ್ ತರಹ ಆಗುತ್ತದೆ. ಇದಕ್ಕೆಲ್ಲಾ ಒಂದು ಅಂದಾಜನ್ನು ಇಟ್ಟುಕೊಂಡು ಸಮರ್ಪಕವಾದ ಆ ಒಂದು ಕಾಮಗಾರಿಯನ್ನು ಮಾಡಿ ದೀರ್ಘ ಕಾಲದ ಒಂದು ಪ್ರಯೋಜನ ವಾಗುವಂತಹ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೃಷ್ಣ ಪಾಲೇಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಯಾವುದೇ ಜೀವಹಾನಿಯಾಗಿರುವುದಿಲ್ಲ. ಆ ಅಳಿವೆ ಬಾಗಿಲಿನಲ್ಲಿ 12 ಅಪಘಾತಗಳು ಆಗಿವೆ, ಅದು ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗ್ಗೆ ಸರ್ಕಾರ ಹೆಚ್ಚು ಗಮನವನ್ನು ಹರಿಸಿದೆ. ನಾನು ಆಗಸ್ಟ್ ತಿಂಗಳಿನಲ್ಲಿ ಈ ಬಗ್ಗೆ ಒಂದು ಸಭೆಯನ್ನು ಕರೆದು ಮೀನುಗಾರರಿಗೆ ತೊಂದರೆಯಾಗದ ರೀತಿಯಲ್ಲಿ ಅಲ್ಲಿ ಹೂತುಹೋದಂತಹ ಬೋಟ್ ಅದರ ಹೆಸರು ಸಮೀನಾ, ಅದು ಹೂತು ಹೋಗಿದೆ. ಅದನ್ನು ತೆಗೆಯುವುದಕ್ಕೆ

ಈಗಾಗಲೇ 20 ಲಕ್ಷದ ಮೇಲ್ಪಟ್ಟು ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ಈಗಾಗಲೇ ಸರ್ಕಾರದಿಂದ ಅನುಮೋದನೆಯನ್ನು ಕೊಟ್ಟಿದೆ. ಅದನ್ನು ತೆಗೆಯುತ್ತೇವೆ. ನಮ್ಮ ಗೌರವಾನ್ವಿತ ಸದಸ್ಯರು ಹೇಳಿದ ಹಾಗೆ ಅಲ್ಲಿ ಹೂಳೆತ್ತುವುದಕ್ಕೆ ಈಗಾಗಲೇ ನಾವು fisheries ಇಲಾಖೆಗೆ 10,98,000 ಆಡಳಿತ ಅನುಮೋದನೆಗೆ ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದೇವೆ. ಆದರೆ ಇನ್ನು ಆಡಳಿತ ಅನುಮೋದನೆಯು ಸಿಗಲಿಲ್ಲ. ಈಗಾಗಲೇ 1,85,000 ಕೋಟಿ ರೂಪಾಯಿಗಳ ಕೆಲಸವು ಸಂಪೂರ್ಣವಾಗಿ ಆಗಿದೆ. ಆದರೆ ಮುಂದಿನ ದಿನಗಳಲ್ಲಿ ಅದನ್ನು ಇವತ್ತು ಮೀನುಗಾರಿಕೆ ಇಲಾಖೆಯವರು ಕೊಡದೆ ಇದ್ದರೂ ಕೂಡ ನಮ್ಮ ಇಲಾಖೆಯು ಅದನ್ನು ಸಂಪೂರ್ಣವಾಗಿ ಹೂಳೆತ್ತುವಂತಹ ಕೆಲಸವನ್ನು 2010–11ರ ಸಾಲಿನಲ್ಲಿ ಅನುದಾನವನ್ನು ಒದಗಿಸುವುದಕ್ಕೆ ಸರ್ಕಾರವು ಕ್ರಮ ಕೈಗೊಳ್ಳುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಯು.ಟಿ.ಖಾದರ್ : ಬಹುಶಃ ಇವತ್ತು ಮೀನುಗಾರಿಕೆ ಇಲಾಖೆಯವರು ಕೊಡದೆ ಇದ್ದರೂ ಕೂಡ ಬಂದರು ಇಲಾಖೆಯ ಮುಖಾಂತರ ಮಾಡುವುದರ ಬಗ್ಗೆ ಒಂದು ಆಶ್ವಾಸನೆಯನ್ನು ನಮ್ಮ ಜಿಲ್ಲೆಯ ಜನತೆಗೆ ಕೊಟ್ಟಿದ್ದಾರೆ. ಬಹುಶಃ ಅದಕ್ಕೆ ಎಷ್ಟು ಅನುದಾನವನ್ನು ಮೀಸಲು ಇಡಬಹುದು ಎಂದು ಮಾನ್ಯ ಸಚಿವರು ಹೇಳಿದರೆ ಉತ್ತಮ. ಇನ್ನು ಎರಡನೆಯದಾಗಿ ಹೇಳುವುದಾದರೆ, ಮೀನುಗಾರಿಕೆ ಮತ್ತು ಬಂದರ್ ಎರಡು ಇದು ಜೊತೆ ಜೊತೆಯಲ್ಲಿ ಇದ್ದರೆ ಮಾತ್ರ ಸಮರ್ಥವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಅದನ್ನು ಬೇರೆ ಬೇರೆ ಮಾಡಿದರೆ ಮತ್ತಷ್ಟು ಕೆಲಸವನ್ನು ಮಾಡುವುದಕ್ಕೆ ಕಷ್ಟವಾಗುವಂತಹ ಪರಿಸ್ಥಿತಿಯಾಗಿದೆ. ಇದರ ಬಗ್ಗೆಯೂ ಕೂಡ ಸರ್ಕಾರವು ಆಲೋಚನೆಯನ್ನು ಮಾಡಬೇಕು.

ಶ್ರೀ ಕೆ. ಅಭಯಚಂದ್ರ ಜೈನ್ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಳಿವೆ ಬಾಗಿಲುಗಳಲ್ಲಿ ಹೂಳುಗಳು ಇದ್ದು, ಅದನ್ನು ತೆಗೆಯುವಂತಹ ಕೆಲಸವು ತುಂಬಾ ವರ್ಷದಿಂದ ಆಗಿರುವುದಿಲ್ಲ. ಈಗ ಅದನ್ನು ಸಮಗ್ರವಾಗಿ ಮಾಡಬೇಕು. ಬರೀ ಮಂಗಳೂರು ಮಾತ್ರವಲ್ಲ,

ಅಧ್ಯಕ್ಷರು : ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲರೂ ಕೂಡ ಮಾತನಾಡಬಹುದು.

ಶ್ರೀ ಕೆ. ಅಭಯಚಂದ್ರ ಜೈನ್ : ಎಲ್ಲಾ ಕರಾವಳಿಯ ಸಮುದ್ರ ಸೇರುವಂತಹ ಪ್ರದೇಶಗಳಲ್ಲಿ ಅಳಿವೆ ಬಾಗಿಲಿನಲ್ಲಿ ಎಲ್ಲಾ ಕಡೆಯಲ್ಲಿ ಹೂಳು

ತೆಗೆಯುವಂತಹ ಕೆಲಸಗಳು ಆಗಬೇಕು. ಇಲ್ಲದೆ ಹೋದರೆ ಮೀನುಗಾರರಿಗೆ ಬಹಳ ತೊಂದರೆಯಾಗುತ್ತದೆ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ಅಲ್ಲಿ ಬಹಳ ವರ್ಷಗಳಿಂದ ಹೂಳು ತುಂಬಿಕೊಂಡಿತ್ತು. ಕಳೆದ ವರ್ಷದ ಬಜೆಟ್‌ನಲ್ಲಿ ವಿಶೇಷವಾಗಿ ಅನುದಾನವನ್ನು ಕೊಟ್ಟಿದ್ದಾರೆ. ನಮ್ಮ ಮಲ್ಪೆ ಬಂದರು, ಕಾರವಾರ ಬಂದರು ಇರಬಹುದು. ಎಲ್ಲಾ ಕಡೆಯಲ್ಲಿ ಒಂದು ಹಂತದ ಹೂಳು ತೆಗೆಯುವ ಕೆಲಸವು ನಡೆದಿದೆ. ಅಲ್ಲಿ contract ತೆಗೆದುಕೊಂಡವರು ಬರಲಿಲ್ಲ. ಒಂದು ಹಂತದ ಕೆಲಸವು ನಡೆದಿದೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ನನ್ನ ಒಂದು ಸಲಹೆ ಏನೆಂದರೆ, ಈ ಹೂಳೆತ್ತುವಂತಹ ಕಾಮಗಾರಿಯನ್ನು contract ಕೊಟ್ಟು ಮಾಡಿದರೆ ಬಹಳ expensive. ಕಾರವಾರ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಈ ಮೂರು ಜಿಲ್ಲೆಗಳಿಗೆ ಆಗುವ ಹಾಗೆ ಸರ್ಕಾರವೆ ಒಂದು dredger ಅನ್ನು ಖರೀದಿಸಿ ಇಟ್ಟುಕೊಂಡರೆ ಒಳ್ಳೆಯದು. ಅದನ್ನು KFDC ಮೂಲಕ Fisheries Development Corporation ಮೂಲಕ dredger ಖರೀದಿಸಿದರೆ ಸುಮಾರು 10 ಕೋಟಿ ರೂಪಾಯಿಗಳಲ್ಲಿ ಅದು ಸಿಗುತ್ತದೆ. ಆಗ ನಮ್ಮ ಮೂರು ಜಿಲ್ಲೆಗಳಲ್ಲಿ dredger ಮಾಡುವುದಕ್ಕೆ ಅನುಕೂಲವಾಗುತ್ತದೆ. ಹಾಗಾಗಿ ಸರ್ಕಾರವೆ dredger ಅನ್ನು ಖರೀದಿಸಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಕೃಷ್ಣಪಾಲೇಮಾರ್ : ಮಾನ್ಯ ಸದಸ್ಯರು ಹೇಳುವಂತಹ ಸಮಸ್ಯೆಗಳು ಬಹಳ ಇದೆ. ನಿಜವಾದಂತಹ ಸಮಸ್ಯೆ ನಮ್ಮ ಅಭಯಚಂದ್ರ ಜೈನ್‌ರವರು, ರಘುಪತಿ ಭಟ್‌ರವರು ಹೇಳಿರುವಂತಹ ಸಮಸ್ಯೆಗಳು ಅದು ನಿಜವಾದ ಸಮಸ್ಯೆಯಾಗಿರುತ್ತದೆ. ಮುಂದಿನ ದಿನಗಳಲ್ಲಿ ನಾವು ಹಂತ ಹಂತವಾಗಿ ಎಲ್ಲಾ ಬಂದರುಗಳಲ್ಲಿ ಹೂಳು ಎತ್ತುವಂತಹ ಕೆಲಸವನ್ನು ಮಾಡುತ್ತೇವೆ. ಅಲ್ಲಿರುವಂತಹ ಮೀನುಗಾರರಿಗೆ ಯಾವುದೇ ರೀತಿಯಿಂದಲೂ ತೊಂದರೆಯಾಗದಂತೆ ಸರ್ಕಾರವು ನೋಡಿಕೊಳ್ಳುತ್ತದೆ. ಹೊಸ dredger ಅನ್ನು purches ಮಾಡಬೇಕೆಂದು ಹೇಳಿ ರಘುಪತಿ ಭಟ್‌ರವರು ಕೇಳಿದ ಹಾಗೆ ಅದನ್ನು ನಾವು ಮುಂದಿನ ದಿನಗಳಲ್ಲಿ ಈ ಬಗ್ಗೆ ಮಾನ್ಯ

ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಸರ್ಕಾರವು ಮಾಡುತ್ತದೆ.

ಶ್ರೀ ಕೆ. ಗೋಪಾಲ ಭಂಡಾರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅದನ್ನು ಮಾಡುತ್ತೇವೆಂದು ಹೇಳಿದರು. ಈ ಪ್ರಶ್ನೆಯ ಕೊನೆಗೆ ಅನುದಾನವನ್ನು ಮೀಸಲಿಡಲಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಅನುದಾನ ಇಡದೆ ಏನಾದರೂ ಕೆಲಸವನ್ನು ಮಾಡುವುದಕ್ಕೆ ಆಗುತ್ತದೆಯೇ? ಅಥವಾ ವಿಶೇಷವಾಗಿ ಏನಾದರೂ ಅನುದಾನವನ್ನು ತಾವು ತೆಗೆದುಕೊಳ್ಳುತ್ತೀರಾ? ಎನ್ನುವ ಬಗ್ಗೆ ತಾವು ಉತ್ತರವನ್ನು ಕೊಡಬೇಕು.

ಶ್ರೀ ಕೃಷ್ಣಪಾಲೇಮಾರ್ : ವಿಶೇಷವಾಗಿ ಅನುದಾನವನ್ನು ತೆಗೆದು ಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು. ನಮಗೆ ಅನುದಾನವನ್ನು ಕೊಟ್ಟಿಲ್ಲ ವೆಂದು ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ.

ಶ್ರೀ ಬಿ. ರಮಾನಾಥ ರೈ : ಎಲ್ಲಾ ಕಡೆಯಲ್ಲಿ ಹೂಳು ತುಂಬಿಕೊಂಡು ಕೆಲವು ಕಡೆಗಳಲ್ಲಿ accident ಆಗಿ ಸತ್ತಿರುವಂತಹದ್ದು ಇದೆ. ಅದಕ್ಕಾಗಿ ತಾವು ಡ್ರಗ್‌ಜಿಂಗ್ machine ತೆಗೆದುಕೊಂಡರೆ, ಅದು ಶಾಶ್ವತವಾಗಿ ಇರುತ್ತದೆ. ಕಾಲಕಾಲಕ್ಕೆ ಅದನ್ನು ಸರಿಪಡಿಸುತ್ತಾ ಇರಬಹುದು. ಏಕೆಂದರೆ contract ಕೊಟ್ಟರೆ ಅದು ಇನ್ನು costly ಆಗುತ್ತದೆ. ಅದಕ್ಕೆ ಇನ್ನಾದರೂ permanent solution ಮಾಡಬೇಕು. ಏಕೆಂದರೆ, ಈ ಮಾತನ್ನು ಹೇಳುತ್ತಾ ಬಹಳ ವರ್ಷದಿಂದ ಕೇಳುತ್ತಾ ಇರುವುದು ಅದಕ್ಕೆ ನೀವು ಉತ್ತರವನ್ನು ಕೊಡುತ್ತಾ ಇರುವುದು ಇದು ಆಗಬಾರದು. ಅದು ಇದಕ್ಕೆ ಸೀಮಿತವಾಗಿರಬೇಕು..

ಅಧ್ಯಕ್ಷರು : ಆಯಿತು.

ಶ್ರೀ ಬಿ. ರಮಾನಾಥ ರೈ : ಮಳೆಗಾಲದಲ್ಲಿ ನಮ್ಮ ಮಂತ್ರಿಗಳು ಒಂದು dredging machine ನ್ನು ತೆಗೆದುಕೊಳ್ಳಬೇಕಾಗಿತ್ತು.

ಅಧ್ಯಕ್ಷರು : ಆಯಿತು. ಮತ್ತು ಮಾತು ಕೆಡಿಸುವುದು ಬೇಡ.

ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯ ಮಂಡಳಿಯ ಅಧಿಕಾರ ಅವಧಿ

70 (632) ಶ್ರೀ ಸುಭಾಷ್ ಆರ್. ಗುತ್ತಿಗೆದಾರ್ (ಆಳಂದ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯ ಅಧಿಕಾರ ಅವಧಿ ಎಂದು ಮುಗಿಯುವುದು;